**PW_1**

## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ

### ಸಿ.ಸಿ. 1651 /2022

| | | |
|---|---|---|
| ಸಾಕ್ಷಿದಾರರ ಹೆಸರು | ನಾಜೀಯ ಬಾನು | PW:1 |
| ತಂದೆಯ ಹೆಸರು | ಮೊಹಮ್ಮದ್ ಭಕ್ಷಿ | CW:1 |
| ವಯಸ್ಸು | 27 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕ : 15/11/2024 |
| ವಾಸ | ನೆಹರು ನಗರ, ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಅತ್ತೆ ಅವರು ಈಗ ಜೀವಂತ ಇಲ್ಲ. 3 ಮತ್ತು 6 ನೇ ಆರೋಪಿ ನನ್ನ ನಾದಿನಿಯರು. 4 ನೇ ಆರೋಪಿ 6 ನೇ ಆರೋಪಿಯ ಗಂಡ. 5 ನೇ ಆರೋಪಿ 3 ನೇ ಆರೋಪಿಯ ಗಂಡ. ಚಾಸಾ 4 ಮತು 5 ನನ್ನ ತಂದೆ ತಾಯಿ. ನನ್ನ ಮತ್ತು 1 ನೇ ಆರೋಪಿಯ ಮದುವೆ ದಿಃ 28.10.2016 ರಂದು ನಮ್ಮ ಮತ ಪದ್ದತಿ ಪ್ರಕಾರ ಆಗಿರುತ್ತದೆ. ನಮ್ಮ ಮದುವೆ ನಂತರ ಆರೋಪಿತರು ನನಗೆ 3 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾರೆ. ಆಗ ನನಗೆ 1 ನೇ ಆರೋಪಿ ನನಗಿಂತ ಮೊದಲು ಇನ್ನೊಬ್ಬರಿಗೆ ಮದುವೆಯಾದ ವಿಷಯ ಗೊತ್ತಾಯಿತು. ಈ ವಿಷಯ ಗೊತ್ತಾದರೂ ಕೂಡ ನಾನು ನನ್ನ ಗಂಡನ ಜೊತೆಯಲ್ಲಿಯೇ ಇದ್ದೆ. ವಿಷಯ ಗೊತ್ತಾದ ನಂತರ ಆರೋಪಿತರು ನನಗೆ ತುಂಬಾ ಹಿಂಸೆ ಕೊಡಲು ಶುರುಮಾಡಿದರು, ನನ್ನ ತಂದೆ ತಾಯಿ ಕಡೆಯಿಂದ

ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಲು ಪ್ರಾರಂಭ ಮಾಡಿದರು. ಸಂಘದಲ್ಲಿ ನನ್ನನ್ನು ಕರೆಯಿಸಿ ಅಲ್ಲಿ ನನ್ನ ಹೆಸರಿನಲ್ಲಿ ಸಾಲ ಪಡೆದರು. ಆ ಹಣವನ್ನು ಆರೋಪಿತರು ಉಪಯೋಗಿಸಿಕೊಂಡರು. ನಂತರ ಆ ಸಾಲದ ಹಣವನ್ನು ನಾನೇ ತೀರಿಸಬೇಕು ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿ ಹೊಡೆಯಲು ಶುರು ಮಾಡಿದರು. 2020 ರಲ್ಲಿ ನನಗೆ ನನ್ನ ಗಂಡನ ಮನೆಯಿಂದ ಹೊರಗಡೆ ತಳ್ಳಿದರು. ಆಗ ನನಗೆ ಹೊಡೆದರು, ಅವಾಚ್ಯ ಶಬ್ದಗಳಿಂದ ಬೈದರು ಮತ್ತು ನಾನು ಆ ಮನೆಗೆ ಬರುವುದು ಬೇಡ ಸಾಯಿ ಎಂದು ಹೇಳಿದರು. ಅದರಂತೆ 2 ರಿಂದ 3 ಲಕ್ಷ ಹಣ ತೆಗೆದುಕೊಂಡು ಬಾ ಅಂತಾ ಹಿಂಸೆ ಕೊಡಲು ಶುರು ಮಾಡಿದರು. ಹಣ ತರದಿದ್ದರೇ ಸತ್ತು ಹೋಗು ಎಂದು ಬೆದರಿಕೆ ಹಾಕಲು ಶುರುಮಾಡಿದರು. ಆಗ 4 ರಿಂದ 6 ನೇಆರೋಪಿ ನಮ್ಮ ಮನೆಗೆ ಬರುತ್ತಿದ್ದು ಅವರು ಒಡವೆ ಪಡೆದುಕೊಂಡು ಹೋದರು. ನನಗೆ ಹೊಡೆಯುವಾಗ ಅಕ್ಕ ಪಕ್ಕದ ಮನೆಯವರಾದ ಚಾಸಾ 6 ರಿಂದ 8 ರವರು ಬಂದು ಗಲಾಟೆ ಬಿಡಿಸಿದರು. ಸಂಘದ ಸಾಲವನ್ನು ತೀರಿಸಲು ಆಗದೇ ನನ್ನ ಗಂಡ ಮನೆ ಬಿಟ್ಟು ಹೋದರು. ನಂತರ ಉಳಿದ ಆರೋಪಿತರೆಲ್ಲರೂ ನನಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡಲು ಶುರುಮಾಡಿದರು. ಈ ವಿಚಾರ ಎಲ್ಲಾ ನಾನು ಮೊದಲು ನನ್ನ ತಂದೆ ತಾಯಿಗೆ ತಿಳಿಸಿ ನಂತರ ಚರ್ಚಿಸಿ ದಿಃ 15.09.2021 ರಂದು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದರಿಂದ ಸದರಿ ದೂರು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದೂರು ಕೊಟ್ಟ 2 ದಿನದ ನಂತರ ಪೊಲೀಸರು ಚಾಸಾ 2 ಮತ್ತು 3 ರವರ ಸಮಕ್ಷಮ ನಿಪಿ 2 ರಂತೆ ಮಹಜರ್ ಮಾಡಿರುತ್ತಾರೆ. ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ 2 ಮಾಡುವ ಕಾಲಕ್ಕೆ ನನ್ನ ಮತ್ತು 1 ನೇ ಆರೋಪಿ ಮದುವೆಯಾದ ಭಾವಚಿತ್ರ, ಮದುವೆ ಸರ್ಟಿಫಿಕೇಟ್ ನ್ನು ನೀಡಿರುತ್ತೇನೆ. ಅದನ್ನು ಗುರುತಿಸಿದ್ದು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು.

**PW_1**

ನಿಪಿ.2 ರ ಜೊತೆ ಒಂದು ನಕಾಶೆ ಇರುತ್ತದೆ, ಅದಕ್ಕೂ ನಾನು ಸಹಿ ಮಾಡಿರುತ್ತೇನೆ, ಅದರಲ್ಲಿರುವ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ 2 ಮಾಡುವ ಕಾಲಕ್ಕೆ ಎರಡು ಪೋಟೋ ತೆಗೆದಿರುತ್ತಾರೆ. ಅವುಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 4 ಮತ್ತು 6 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 3 ಮತ್ತು 5 ನೇ ಆರೋಪಿತರು ಹಾಜರಿರುವುದಿಲ್ಲ. ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಅವರನ್ನು ಗುರುತಿಸಲು ಕೂಡ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ.

**ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**